**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 322/2018**

**ಚಾ.ಸಾ - 15**
**ಪ್ರಾ.ಸಾ - 9**

**ಸಾಕ್ಷಿಗೆ ದಿನಾಂಕ 05-03-2026ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಶಿವಮ್ಮ |
| ಗಂಡನ ಹೆಸರು | ಃ | ಜಾನಪ್ಪ |
| ವಯಸ್ಸು | ಃ | 35 ವರ್ಷ |
| ಉದ್ಯೋಗ | ಃ | ಧಾಬಾದಲ್ಲಿ ಕೆಲಸ |
| ವಾಸಸ್ಥಳ | ಃ | ಜೇವರ್ಗಿ |

**ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತಿಲ್ಲ. ಚಾಸಾ-1 ನನಗೆ ಗೊತ್ತು. ಚಾಸಾ-6 ರಿಂದ 14, 16 ಮತ್ತು 20 ಗೊತ್ತು. ಚಾಸಾ-17 ನನ್ನ ಮಗನಾಗಬೇಕು. ಚಾಸಾ-18 , 19 ಗೊತ್ತಿಲ್ಲ. ಮೃತ ಮಲ್ಲಣ್ಣ ಗೊತ್ತು.

5-6 ವರ್ಷಗಳ ಹಿಂದೆ ಮದರಿಯಿಂದ ಶಹಾಪುರಕ್ಕೆ ಕ್ರೂಷರ್ ವಾಹನದಲ್ಲಿ ಹೋಗಿದ್ದೆವು. ಕಾರ್ಯಕ್ರಮ ಮುಗಿಸಿಕೊಂಡು ಬರುವಾಗ ಶಹಾಪೂರ ದಾಟಿದ ನಂತರ ನಾವು ಬೇಹೋಶ್ ಆಗಿರುತ್ತೇವೆ. ನಮಗೆ ಅರಿವು ಇರಲಿಲ್ಲ ಬಸ್ಸಿನಲ್ಲಿ ಕರೆದುಕೊಂಡು ಬಂದಿರುತ್ತಾರೆ. ಮೂಗಿಗೆ ಪೆಟ್ಟು ಬಿದ್ದಿತ್ತು. ಒಬ್ಬರ ಕಾಲು ಮುರಿದಿರುತ್ತದೆ. ಒಬ್ಬರು ತೀರಿಕೊಂಡಿರುತ್ತಾರೆ. ಅಪಘಾತವು ಕ್ರೂಷರ್ ವಾಹನದ ತಪ್ಪಿನಿಂದ ಆಗಿರುತ್ತದೆ. ಲಾರಿ ಮತ್ತು ಕ್ರೂಷರನ್ನು ಯಾರು ಚಲಾಯಿಸುತ್ತಿದರು ಎಂದು ಗೊತ್ತಿಲ್ಲ ಅವರ ಹೆಸರು ಗೊತ್ತಿಲ್ಲ. ಸದರಿ ಲಾರಿ ಮತ್ತು ಕ್ರೂಷರನ ನಂಬರ್ ಗೊತ್ತಿಲ್ಲ. ನಾನು ಯಾರ ಮುಂದೆಯೂ ಅಪಘಾತದ ವಿಚಾರ ಹೇಳಿಲ್ಲ.

ಸಾಕ್ಷಿಗೆ ನಿಪಿ-3 ಮತ್ತು 4 ಕ್ರೂಷರ್ ಇರುವ ಪೋಟೊವನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಗೆ ಲಾರಿ ಇರುವ 2 ಪೋಟೊಗಳನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿರುಸಿರುವುದಿಲ್ಲ.

(ಮಾನ್ಯ ಸ.ಸ.ಅ ರವರು ಸಾಕ್ಷಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿಃ 13-03-2015ರಂದು ಸಂಜೆ 6-00 ಗಂಟೆ ಸುಮಾರಿಗೆ ಶಹಾಪೂರ-ಜೇವರ್ಗಿ ಮುಖ್ಯ ರಸ್ತೆಯ ಮುದಬಾಳ ಕೆ ಕ್ರಾಸ್ ಹತ್ತಿರ ಅಪಘಾತ ಆಗಿರುತ್ತದೆ ಎಂದರೆ ಸರಿ. ಕ್ರೂಸರ್ ನಂ.ಕೆಎ-32 ಎಂ.-6243 ನೇದ್ದರ ಚಾಲಕ ಶಿವಕುಮಾರನು ಅತಿವೇಗವಾಗಿ ಮತ್ತು ಅಲಕ್ಷತನದಿಂದ ಚಾಲನೆ ಮಾಡಿಕೊಂಡು ಬಂದು ಮುಂದೆ ಹೋಗುತ್ತಿದ್ದಂತಹ ಲಾರಿ ನಂ.ಎಂ.ಹೆಚ್-38 ಡಿ-0514ನೇದ್ದರ ಚಾಲಕನು ಯಾವುದೇ ಇಂಡಿಕೇಟರ್ ಹಾಕಲಾರದೇ ಸಂಚಾರಿ ನಿಯಮ ಪಾಲನೆ ಮಾಡದೇ ಬ್ರೇಕ್ ಹಾಕಿದ್ದರಿಂದ ಒಮ್ಮೆಲೇ ಕ್ರೂಸರ್ ಚಾಲಕನು ಹೋಗಿ ಡಿಕ್ಕಿಪಡಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಅಪಘಾತವು ಕ್ರೂಸರ್ ಚಾಲಕ ಮತ್ತು ಲಾರಿ ಚಾಲಕ ಇಬ್ಬರ ತಪ್ಪಿನಿಂದ ಆಗಿದೆ ಎಂದರೆ ಕ್ರೂಸರ್ ಚಾಲಕನ ತಪ್ಪಿನಿಂದ ಆಗಿದೆ ಎಂದು ಉತ್ತರಿಸುತ್ತಾರೆ.

ಅಪಘಾತದ ಕುರಿತು ನೀವು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೀರಿ ಎಂದರೆ ಸರಿಯಲ್ಲ. 2ನೇ ಆರೋಪಿಯನ್ನು ಗುರುತಿಸಿದ ಬಗ್ಗೆ ಮರುಹೇಳಿಕೆಯನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-18 ಎಂದು ಮರುಹೇಳಿಕೆಯನ್ನು ನಿಪಿ-19 ಎಂದು ಗುರುತಿಸಲಾಯಿತು.

ನಿಮಗೆ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿಗೆ ಸಹಾಯ ಮಾಡಲೆಂದು ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ಪರ ವಕೀಲರಿಂದ ಪಾಟೀ ಸವಾಲು ಇರುವುದಿಲ್ಲ.**

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು ಜೇವರಗಿ

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 322/2018**

**ಚಾ.ಸಾ - 16**
**ಪ್ರಾ.ಸಾ - 10**

**ಸಾಕ್ಷಿಗೆ ದಿನಾಂಕ 05-03-2026ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಶರಣಪ್ಪ |
| ತಂದೆಯ ಹೆಸರು | ಃ | ಗುಂಡಪ್ಪ |
| ವಯಸ್ಸು | ಃ | 27 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಜೇವರ್ಗಿ |

**ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತಿಲ್ಲ. ಚಾಸಾ-1 ನನಗೆ ಗೊತ್ತು. ಚಾಸಾ-6 ರಿಂದ 15, 17 ರಿಂದ 20 ಗೊತ್ತು. ಮೃತ ಮಲ್ಲಣ್ಣ ಗೊತ್ತು.

11 ವರ್ಷಗಳ ಹಿಂದೆ ಮದರಿಯಿಂದ ಸಗರಕ್ಕೆ ಹೋಗಿ ಕಾರ್ಯಕ್ರಮವನ್ನು ಮುಗಿಸಿಕೊಂಡು ಬರುವಾಗ ಮುದಬಾಳ ಹಳ್ಳದ ಹತ್ತಿರ ಅಪಘಾತ ಆಗಿರುತ್ತದೆ. ಅಲ್ಲಿ ಲಾರಿ ನಿಲ್ಲಿಸಿದ್ದರು ಕ್ರೂಷರ್ ಚಾಲಕನು ಹೋಗಿ ಲಾರಿಗೆ ಗುದ್ದಿರುತ್ತಾನೆ. ಸದರಿ ಅಪಘಾತದಲ್ಲಿ ಮಲ್ಲಣ್ಣ ಮೃತಪಟ್ಟಿರುತ್ತಾನೆ. ಸದರಿ ಅಪಘಾತದಲ್ಲಿ ನನ್ನ ಕೈಗೆ ಗಾಯವಾಗಿತ್ತು. ಲಾರಿ ನಂಬರ್ ಮತ್ತು ಕ್ರೂಸರ್ ನಂಬರ್ ನೆನಪಿಲ್ಲ. ಕ್ರೂಷರನ್ನು ಶಿವಕುಮಾರ ಚಲಾಯಿಸುತ್ತಿದ್ದನು. ಅಪಘಾತದ ವಿಚಾರವನ್ನು ಪೊಲೀಸರ ಮುಂದೆ ಹೇಳಿರುತ್ತೇನೆ.

ಸಾಕ್ಷಿಗೆ ನಿಪಿ-3 ಮತ್ತು 4 ಕ್ರೂಷರ್ ಇರುವ ಪೋಟೊವನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಗೆ ಲಾರಿ ಇರುವ 2 ಪೋಟೊಗಳನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿರುಸಿರುದ್ದರಿಂದ ಸದರಿ ಫೋಟೊಗಳನ್ನು ನಿಪಿ-20 ಮತ್ತು 21 ಎಂದು ಗುರುತಿಸಲಾಯಿತು.

(ಮಾನ್ಯ ಸ.ಸ.ಅ ರವರು ಸಾಕ್ಷಿ ಭಾಗಶಃ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ

ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ದಿಃ 13-03-2015ರಂದು ಸಂಜೆ 6-00 ಗಂಟೆ ಸುಮಾರಿಗೆ ಶಹಾಪೂರ-ಜೇವರ್ಗಿ ಮುಖ್ಯ ರಸ್ತೆಯ ಮುದಬಾಳ ಕೆ ಕ್ರಾಸ್ ಹತ್ತಿರ ಅಪಘಾತ ಆಗಿರುತ್ತದೆ ಎಂದರೆ ಸರಿ. 1ನೇ ಆರೋಪಿಯು ತನಗೆ ಸೇರಿದಂತಹ ಕ್ರೂಸರ್ ನಂ.ಕೆಎ-32 ಎಂ.-6243 ನೇದ್ದನ್ನು ಅತಿವೇಗವಾಗಿ ಮತ್ತು ಅಲಕ್ಷತನದಿಂದ ಚಾಲನೆ ಮಾಡಿಕೊಂಡು ಬಂದು ಮುಂದೆ ಹೋಗುತ್ತಿದ್ದಂತಹ ಲಾರಿ ನಂ.ಎಂ.ಹೆಚ್-38 ಡಿ-0514ನೇದ್ದರ ಚಾಲಕನು ಯಾವುದೇ ಇಂಡಿಕೇಟರ್ ಹಾಕಲಾರದೇ ಸಂಚಾರಿ ನಿಯಮ ಪಾಲನೆ ಮಾಡದೇ ಬ್ರೇಕ್ ಹಾಕಿದ್ದರಿಂದ ಒಮ್ಮೆಲೇ ಕ್ರೂಸರ್ ಚಾಲಕನು ಹೋಗಿ ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿ. ಅಪಘಾತವು ಕ್ರೂಸರ್ ಚಾಲಕ ಮತ್ತು ಲಾರಿ ಚಾಲಕ ಇಬ್ಬರ ತಪ್ಪಿನಿಂದ ಆಗಿದೆ ಎಂದರೆ ಸರಿ.

2ನೇ ಆರೋಪಿಯನ್ನು ಗುರುತಿಸಿದ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೀರಿ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಬಿ.ವೈ. ವಕೀಲರಿಂದ</u>**

ಕ್ರೂಸರ್ ಚಾಲಕನು ಅತಿವೇಗ ಮತ್ತು ಅಲಕ್ಷತನದಿಂದ ಚಲಾಯಿಸಿಕೊಂಡು ಬಂದು ನಿಂತಿದ್ದಂತಹ ಲಾರಿಗೆ ಡಿಕ್ಕಿಪಡಿಸಿದ್ದರಿಂದ ಅಪಘಾತ ಆಗಿರುತ್ತದೆ ಎಂದರೆ ಸರಿ. ಅಪಘಾತವಾದ ನಂತರ ನೀವು ಎಲ್ಲಿಯೂ ಹೋಗಿಲ್ಲ ಇದೇ ಮೊದಲ ಬಾರಿಗೆ ನ್ಯಾಯಾಲಯಕ್ಕೆ ಬಂದಿದ್ದೀರಿ ಎಂದರೆ ಸರಿ. 2ನೇ ಆರೋಪಿ ಲಾರಿ ಚಾಲಕನು ಯಾರು ಗೊತ್ತಿಲ್ಲ ಎಂದರೆ ಸರಿ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು ಜೇವರಗಿ

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 322/2018**

**ಚಾ.ಸಾ - 17**
**ಪ್ರಾ.ಸಾ - 11**

**ಸಾಕ್ಷಿಗೆ ದಿನಾಂಕ 05-03-2026ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಸಿದ್ದು |
| ತಂದೆಯ ಹೆಸರು | ಃ | ಜಾನಪ್ಪ |
| ವಯಸ್ಸು | ಃ | 28 ವರ್ಷ |
| ಉದ್ಯೋಗ | ಃ | ಹೋಟೆಲನಲ್ಲಿ ಕೆಲಸ |
| ವಾಸಸ್ಥಳ | ಃ | ಆಲ್ಲೂರ |

**ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತಿಲ್ಲ. ಚಾಸಾ-1, 6 ರಿಂದ 12 ನನಗೆ ಗೊತ್ತಿಲ್ಲ. ಚಾಸಾ-13 ಗೊತ್ತು. ಚಾಸಾ-14 ರಿಂದ 16 ಗೊತ್ತಿಲ್ಲ. ಚಾಸಾ-18 ರಿಂದ 20 ಗೊತ್ತಿಲ್ಲ.

10-11 ವರ್ಷಗಳ ಹಿಂದೆ ಜೇವರ್ಗಿಯಿಂದ ಸಗರಕ್ಕೆ ಹೋಗಿ ಬರುವಾಗ ಮುದಬಾಳ ಕ್ರಾಸ್ ಹತ್ತಿರ ಅಪಘಾತ ಆಗಿರುತ್ತದೆ. ಎದುರು ನಿಂತಿದ್ದಂತಹ ಲಾರಿಗೆ ಕ್ರೂಸರ್ ಚಾಲಕ ಗುದ್ದಿರುತ್ತಾನೆ. ಲಾರಿ ಮತ್ತು ಕ್ರೂಸರನ್ನು ಯಾರು ಚಲಾಯಿಸುತ್ತಿದ್ದರೆಂದು ಗೊತ್ತಿಲ್ಲ ಅವುಗಳ ನಂಬರ್ ಗೊತ್ತಿಲ್ಲ. ಸದರಿ ಅಪಘಾತದಲ್ಲಿ ನನ್ನ ಮುಖಕ್ಕೆ ಪೆಟ್ಟು ಆಗಿತ್ತು. ಚಾಸಾ-7ರವರಿಗೆ ಎರಡು ಕಾಲು ಮುರಿದಿತ್ತು. ಅಲ್ಲಿಂದ ನಮಗೆ ಜೇವರ್ಗಿಯ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ಅಪಘಾತದ ವಿಚಾರವನ್ನು ಪೊಲೀಸರ ಮುಂದೆ ಹೇಳಿರುತ್ತೇನೆ.

ಸಾಕ್ಷಿಗೆ ನಿಪಿ-3 ಮತ್ತು 4 ಕ್ರೂಷರ್ ಇರುವ ಫೋಟೊವನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಗೆ ನಿಪಿ-20 ಮತ್ತು 21 ಲಾರಿ ಇರುವ ಫೋಟೊವನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ.

(ಮಾನ್ಯ ಸ.ಸ.ಅ ರವರು ಸಾಕ್ಷಿ ಭಾಗಶಃ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು

ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿಃ 13-03-2015ರಂದು ಸಂಜೆ 6-00 ಗಂಟೆ ಸುಮಾರಿಗೆ ಶಹಾಪೂರ-ಜೇವರ್ಗಿ ಮುಖ್ಯ ರಸ್ತೆಯ ಮುದಬಾಳ ಕೆ ಕ್ರಾಸ್ ಹತ್ತಿರ ಅಪಘಾತ ಆಗಿರುತ್ತದೆ ಎಂದರೆ ಸರಿ. 1ನೇ ಆರೋಪಿಯು ತನಗೆ ಸೇರಿದಂತಹ ಕ್ರೂಸರ್ ನಂ.ಕೆಎ-32 ಎಂ.-6243 ನೇದ್ದನ್ನು ಅತಿವೇಗವಾಗಿ ಮತ್ತು ಅಲಕ್ಷತನದಿಂದ ಚಾಲನೆ ಮಾಡಿಕೊಂಡು ಬಂದು ಮುಂದೆ ಹೋಗುತ್ತಿದ್ದಂತಹ ಲಾರಿ ನಂ.ಎಂ.ಹೆಚ್-38 ಡಿ-0514ನೇದ್ದರ ಚಾಲಕನು ಯಾವುದೇ ಇಂಡಿಕೇಟರ್ ಹಾಕಲಾರದೇ ಸಂಚಾರಿ ನಿಯಮ ಪಾಲನೆ ಮಾಡದೇ ಬ್ರೇಕ್ ಹಾಕಿದ್ದರಿಂದ ಒಮ್ಮೆಲೇ ಕ್ರೂಸರ್ ಚಾಲಕನು ಹೋಗಿ ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿ. ಅಪಘಾತವು ಕ್ರೂಸರ್ ಚಾಲಕನ ಮತ್ತು ಲಾರಿ ಚಾಲಕನ ತಪ್ಪಿನಿಂದ ಆಗಿದೆ ಎಂದರೆ ಸರಿ. ಸದರಿ ಅಪಘಾತದಲ್ಲಿ ಮಲ್ಲಣ್ಣ ಎಂಬುವವರಿಗೆ ಭಾರೀ ರಕ್ತಗಾಯಗಳಾಗಿ ಮೃತಪಟ್ಟಿರುತ್ತಾರೆ ಎಂದರೆ ಸರಿ.

2ನೇ ಆರೋಪಿಯನ್ನು ಗುರುತಿಸಿದ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೀರಿ ಎಂದರೆ ಸರಿಯಲ್ಲ. ಸದರಿ ಮರುಹೇಳಿಕೆಯನ್ನು ನಿಪಿ-22 ಎಂದು ಗುರುತಿಸಲಾಯಿತು.

ನಿಮಗೆ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿಗೆ ಸಹಾಯ ಮಾಡಲೆಂದು ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಬಿ.ವೈ. ವಕೀಲರಿಂದ**

ಕ್ರೂಸರ್ ಚಾಲಕನು ಅತಿವೇಗ ಮತ್ತು ಅಲಕ್ಷತನದಿಂದ ಚಲಾಯಿಸಿಕೊಂಡು ಬಂದು ನಿಂತಿದ್ದಂತಹ ಲಾರಿಗೆ ಡಿಕ್ಕಿಪಡಿಸಿದ್ದರಿಂದ ಅಪಘಾತ ಆಗಿರುತ್ತದೆ ಎಂದರೆ ಸರಿ. ಪ್ರಕರಕಣಕ್ಕೆ ಸಂಬಂಧಟ್ಟಂತೆ ನೀವು ಎಲ್ಲಿಯೂ ಹೋಗಿಲ್ಲ ಇದೇ ಮೊದಲ ಬಾರಿಗೆ ನ್ಯಾಯಾಲಯಕ್ಕೆ ಬಂದಿದ್ದೀರಿ ಎಂದರೆ ಸರಿ. ಅಪಘಾತವು ಕ್ರೂಸರ ವಾಹನದ ಚಾಲಕನ ತಪ್ಪಿ ನಿಂದ ಆಗಿದೆ ಎಂದರೆ ಸರಿ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು ಜೇವರಗಿ

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 322/2018**

**ಚಾ.ಸಾ - 19**
**ಪ್ರಾ.ಸಾ - 12**

**ಸಾಕ್ಷಿಗೆ ದಿನಾಂಕ 05-03-2026ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಜಾನಪ್ಪ |
| ತಂದೆಯ ಹೆಸರು | ಃ | ಮಹಾದೇವಪ್ಪ |
| ವಯಸ್ಸು | ಃ | 35 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಮದರಿ |

**ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತಿಲ್ಲ. ಚಾಸಾ-1, 6 ರಿಂದ 18 ಮತ್ತು 20 ಗೊತ್ತಿಲ್ಲ. ಮೃತ ಮಲ್ಲಣ್ಣ ಗೊತ್ತಿಲ್ಲ.

ನನಗೆ ಈ ಪ್ರಕರಣದ ಬಗಗೆ ಯಾವುದೇ ಮಾಹಿತಿ ಇಲ್ಲ. ಅಪಘಾತವು ಯಾರ ತಪ್ಪಿ ನಿಂದ ಯಾರ ವಾಹನಗಳಿಂದ ಆಗಿದೆ ಎಂದು ಗೊತ್ತಿಲ್ಲ. ಸದರಿ ವಾಹನಗಳ ನಂಬರ್ ಗೊತ್ತಿಲ್ಲ ಅವುಗಳನ್ನು ಯಾರು ಚಲಾಯಿಸುತ್ತಿದ್ದರು ಎಂದು ಗೊತ್ತಿಲ್ಲ. ಪೊಲೀಸರ ಮುಂದೆ ಹೇಳಿಕೆ ಮತ್ತು ಮರುಹೇಳಿಕೆ ನೀಡಿಲ್ಲ.

ಸಾಕ್ಷಿಗೆ ನಿಪಿ-3 ಮತ್ತು 4 ಕ್ರೂಷರ್ ಇರುವ ಪೋಟೊವನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿರುವುದಿಲ್ಲ.

ಸಾಕ್ಷಿಗೆ ನಿಪಿ-20 ಮತ್ತು 21 ಲಾರಿ ಇರುವ ಪೋಟೊವನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿರುವುದಿಲ್ಲ.

(ಮಾನ್ಯ ಸ.ಸ.ಅ ರವರು ಸಾಕ್ಷಿ ಭಾಗಶಃ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ದಿಃ 13-03-2015ರಂದು ಸಂಜೆ 6-00 ಗಂಟೆ ಸುಮಾರಿಗೆ ಶಹಾಪೂರ-ಜೇವರ್ಗಿ ಮುಖ್ಯ ರಸ್ತೆಯ ಮುದಬಾಳ ಕೆ ಕ್ರಾಸ್ ಹತ್ತಿರ ಅಪಘಾತ ಆಗಿರುತ್ತದೆ ಎಂದರೆ ಗೊತ್ತಿಲ್ಲ. 1ನೇ ಆರೋಪಿಯು ತನಗೆ ಸೇರಿದಂತಹ ಕ್ರೂಸರ್ ನಂ.ಕೆಎ-32 ಎಂ.-6243 ನೇದ್ದನ್ನು ಅತಿವೇಗವಾಗಿ ಮತ್ತು ಅಲಕ್ಷತನದಿಂದ ಚಾಲನೆ ಮಾಡಿಕೊಂಡು ಬಂದು ಮುಂದೆ ಹೋಗುತ್ತಿದ್ದಂತಹ ಲಾರಿ ನಂ.ಎಂ.ಹೆಚ್-38 ಡಿ-0514ನೇದ್ದರ ಚಾಲಕನು ಯಾವುದೇ ಇಂಡಿಕೇಟರ್ ಹಾಕಲಾರದೇ ಸಂಚಾರಿ ನಿಯಮ ಪಾಲನೆ ಮಾಡದೇ ಬ್ರೇಕ್ ಹಾಕಿದ್ದರಿಂದ ಒಮ್ಮೆಲೇ ಕ್ರೂಸರ್ ಚಾಲಕನು ಹೋಗಿ ಡಿಕ್ಕಿಪಡಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಅಪಘಾತವು ಕ್ರೂಸರ್ ಚಾಲಕ ಮತ್ತು ಲಾರಿ ಚಾಲಕನ ತಪ್ಪಿನಿಂದ ಆಗಿದೆ ಎಂದರೆ ಗೊತ್ತಿಲ್ಲ. ಸದರಿ ಅಪಘಾತದಲ್ಲಿ ಮಲ್ಲಣ್ಣ ಎಂಬುವವರಿಗೆ ಭಾರೀ ರಕ್ತಗಾಯಗಳಾಗಿ ಮೃತಪಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ.

ನೀವು ಪೊಲೀಸರ ಮುಂದೆ ಹೇಳಿಕೆಯನ್ನು ಮತ್ತು 2ನೇ ಆರೋಪಿಯನ್ನು ಗುರುತಿಸಿದ ಬಗ್ಗೆ ಪೊಲೀಸರ ಮುಂದೆ ಮರುಹೇಳಿಕೆ ನೀಡಿದ್ದೀರಿ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-23 ಎಂದು ಮರುಹೇಳಿಕೆಯನ್ನು ನಿಪಿ-24 ಎಂದು ಗುರುತಿಸಲಾಯಿತು.

ನಿಮಗೆ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿಗೆ ಸಹಾಯ ಮಾಡಲೆಂದು ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಆರೋಪಿ ಪರ ಶ್ರೀ ಎಸ್.ಬಿ.ವೈ. ವಕೀಲರಿಂದ ಇರುವುದಿಲ್ಲ.</u>**

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು ಜೇವರಗಿ